ಅದನ್ನು ಕೇಳಿದ್ದೇ ಇಬ್ಬರು ಚಿಕ್ಕ ಹುಡುಗಿಯರಲ್ಲಿ ಹಿರಿಯವಳು ಕತೆ ಹೇಳು ಕತೆ ಹೇಳು ಎಂದು ಗಂಟುಬಿದ್ದಳು. ಯುವಕ ಕತೆಯೊಂದನ್ನು ಶುರುಮಾಡಿದ:

'ಹಿಂದೊಮ್ಮೆ ಒಬ್ಬಳು ಬೆರ್ತಾ ಎನ್ನುವ ಹುಡುಗಿಯಿದ್ದಳು. ಇದು ಅವಳ ಕತೆ. ಆಕೆ ತುಂಬಾ ಎಂದರೆ ತುಂಬಾ ಒಳ್ಳೆಯ ಹುಡುಗಿ.'

ಯುವಕ ಕತೆಯನ್ನ ಎತ್ತಿಕೊಳ್ಳುತ್ತಿದ್ದ ಹಾಗೇ ಮಕ್ಕಳಿಗೆ ಅದರಲ್ಲಿ ಕುತೂಹಲವುಂಟಾಯಿತು. ಆದರೆ ಎಲ್ಲಾ ಕತೆಗಳೂ ಕೆಟ್ಟದಾಗಿ ಒಂದೇ ರೀತಿ ಇರೋದು ಎನ್ನುವ ಅರಿವಾಗಿ ಅವರ ಉತ್ಸಾಹ ಕುಗ್ಗಿತು.

'ಆ ಹುಡುಗಿ ಬೆರ್ತಾ ಏನೇ ಕೆಲಸ ಒಪ್ಪಿಸಿದರೂ ಮಾಡುತ್ತಿದ್ದಳು. ಅಷ್ಟು ಶ್ರದ್ಧೆ, ಅಷ್ಟು ಒಳ್ಳೇತನ ಹುಡುಗಿಗೆ. ಹುಡುಗಿ ಎಂದೂ ಸುಳ್ಳು ಹೇಳ್ತಿರಲಿಲ್ಲ. ಬಟ್ಟೆ ಕ್ಲೀನಾಗಿ ಇಟ್ಟುಕೊಳ್ತಿದ್ದಳು, ಹಾಲುಬಾಯನ್ನ ಜಾಮ್ ಅನ್ನೋಹಾಗೆ ಖುಶಿಖುಶಿಯಾಗಿ ತಿನ್ನುವ ಹುಡುಗಿ ಓದಿನಲ್ಲೂ ಮುಂದು. ಅವಳ ನಡತೆಯಂತೂ ನಯ ನಾಜೂಕು ತುಂಬಿದ್ದು.'

'ನೋಡಕ್ಕೆ ಚಂದ ಇದ್ಳ ಅವಳು?' ಇಬ್ಬರಲ್ಲಿ ದೊಡ್ಡವಳು ಕೇಳಿದಳು. 'ಇಲ್ಲ ಬಿಡಿ, ನಿಮ್ಮಷ್ಟು ಚಂದ ಇರ್ಲಿಲ್ಲ, ಆದರೆ ತುಂಬಾ ತುಂಬಾ ಒಳ್ಳೆ ಹುಡುಗಿ.'

ಮಕ್ಕಳಿಗೆ ಈಗ ಕುತೂಹಲ ಹುಟ್ಟಿತು. ಬೆರ್ತಾಳ ಒಳ್ಳೆ ಗುಣಕ್ಕೆ 'ತುಂಬಾ ತುಂಬಾ' ಎಂದು ಸೇರಿಸಿದ್ದೇ ಅವರ ಕುತೂಹಲ ಹೆಚ್ಚಿತ್ತು. ಚಿಕ್ಕಮ್ಮ ಬರೀ ಕಟ್ಟುಕತೆ ಹೇಳ್ತಾ ಇದ್ದಳು, ಈ ಕತೆ ಮಕ್ಕಳ ಬಗ್ಗೆ ಸತ್ಯ ಹೇಳ್ತಾ ಇದೆ ಎಂದುಕೊಂಡರು.

ಯುವಕ ಕತೆ ಮುಂದುವರಿಸಿದ. 'ಆಕೆ ಎಷ್ಟು ಒಳ್ಳೇ ಹುಡುಗಿ

